ಉಪಾಧ್ಯಕ್ಷರು: ಇದು ಬೇರೆ, Calling ateention ಅಲ್ಲ.

19. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ರಾಜು ಎಂಬ ವ್ಯಕ್ತಿ ವಿಷ ಕುಡಿದು ಸತ್ತಿರುವ ಬಗ್ಗೆ.

ಶ್ರೀ ಹೆಚ್.ಎಂ. ವಿಶ್ವನಾಥ್ (ಸಕಲೇಶಪುರ):– ಸನ್ಮಾನ್ಯ ಉಪಾಧ್ಯಕ್ಷರೆ, ಸಕಲೇಶಪುರದಲ್ಲಿ ರಾಜು ಎಂಬ ವ್ಯಕ್ತಿ ಸಾರ್ವಜನಿಕರೆದುರಿನಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉಪಾಧ್ಯಕ್ಷರು:– ವಿಶ್ವನಾಥ್‌ರವರೆ, ಒಂದು ನಿಮಿಷ, ನಾನು ನಿಮ್ಮನ್ನು ಕರೆದಿಲ್ಲ. ತಾವು ಅದೇನು ಕೇಳುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ಒಂದು ನಿಮಿಷ ಕುಳಿತುಕೊಳ್ಳಿ. ಬಸವರಾಜ್ ಹೊರಟ್ಟಿಯವರು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ವಿಚಾರದಲ್ಲಿ ಮಾತನಾಡುತ್ತೀರಿ ಎಂದಿದ್ದೀರಿ ಸೋಮವಾರವೇ?

ಶ್ರೀ ಹೆಚ್.ಎಂ.ವಿಶ್ವನಾಥ್:– ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಅವಕಾಶವನ್ನು ಕೊಡಿ,

ಉಪಾಧ್ಯಕ್ಷರು: Calling ateention ಅಲ್ಲ ಇದು, ಅವರೇನೋ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಈಗ ಶಿಕ್ಷಣ ಸಚಿವರೆ ಬಿಲ್ ಮಂಡಿಸುವಿರಾ?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಸೋಮವಾರದಂದು ಮಂಡಿಸುತ್ತೇನೆ.

ಉಪಾಧ್ಯಕ್ಷರು: ಹಾಗಾದರೆ ಸೋಮವಾರ ಬಿಲ್ ಮಂಡಿಸುವಿರಾ?

ಶ್ರೀ ಹೆಚ್.ಎಂ. ವಿಶ್ವನಾಥ್:– ಶೂನ್ಯವೇಳೆಯಲ್ಲಿ ಕೇಳುತ್ತಿದ್ದೇನೆ. ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ರಾಜು ಎಂಬ ವ್ಯಕ್ತಿ ವಿಷ ಸೇವಿ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಸಕಲೇಶಪುರದಲ್ಲಿ ದೊಡ್ಡ ಗಲಾಟೆ ಆಗಿದೆ. ಸಾವಿಗೆ ಕಾರಣ ಶ್ರೀರಾಮ್ ಫೈನಾನ್ಸ್‌ನಿಂದ ಆತ ಹಣ ತೆಗೆದುಕೊಂಡಿದ್ದ. ಲಾರಿ ತೆಗೆದುಕೊಂಡಿದ್ದ. ಒಂದು ಕಂತು ಕಟ್ಟುವುದು ಬಾಕಿ ಇತ್ತು. ಫೈನಾನ್ಸ್ ಕಡೆಯ ಗೂಂಡಾಗಳು ಆತನ ಮನೆ ಎದುರಿಗೆ ಬಂದು

ಆತನನ್ನು ಹೊಡೆದು ಅವನ ಎದುರುಗಡೆಯೇ ಲಾರಿಯನ್ನೂ ಎತ್ತಿಕೊಂಡು ಹೋಗುವಂತಹ ಕೆಲಸ ಮಾಡಿದಾಗ, ಆ ಮಾಲೀಕ ಅಲ್ಲಿಯೇ ವಿಷ ತೆಗೆದುಕೊಂಡು ಸತ್ತು ಹೋಗುತ್ತಾನೆ. ಅದಾದ ನಂತರ, ಅಲ್ಲಿ ಭಾರಿ ದೊಡ್ಡ ಗಲಾಟೆಯಾಗಿದೆ. ಸಕಲೇಶಪುರ ತಾಲ್ಲೂಕಿನಾದ್ಯಂತ ಪೂರ್ಣ ಬಂದ್ ಆಗಿದೆ. ಸಾವಿರಾರು ಜನರು ಸೇರಿಕೊಂಡಿದ್ದಾರೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಾರಣ, ಇದುವರೆಗೂ ಯಾವ್ಯಾವ ಆತ್ಮಹತ್ಯೆಗಳಾಗಿವೆಯೋ, ಅದರಲ್ಲಿ 50 ಭಾಗಕ್ಕೂ ಹೆಚ್ಚು ಆತ್ಮಹತ್ಯೆಯಾಗಿರುವುದು ಸರ್ಕಾರದ ಸಾಲದಿಂದಾಗಲಿ ಅಥವಾ ರೈತರ ಬೆಳೆ ಸಾಲದಿಂದ ಆಗಿರು ವಷ್ಟಕ್ಕಿಂತಲೂ ಹೆಚ್ಚಾಗಿ ಈ ಲೇವಾದೇವಿಗಳು ಮತ್ತು ಫೈನಾನ್ಸ್‌ನಿಂದ ಖಾಲಿ ಚೆಕ್ಕುಗಳನ್ನು ತೆಗೆದುಕೊಂಡು ಹಣ ಕೊಟ್ಟಿರುವವರೇನದ್ದಾರೆ, ಅವರಿಗೆ ಮನಸ್ಸಿಗೆ ಬಂದಂತೆ ಹಣ ತುಂಬಿಕೊಂಡು ಕೋರ್ಟಿಗೆ ಹಾಕಿದ್ದಾರೆ, ಇವರು ಮಾಡತಕ್ಕಂಥ ಅವಮಾನ ಮತ್ತು ಈ ರೀತಿಯ ತೊಂದರೆ, ಕಿರುಕುಳ ಕೊಡುವುದರಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಳ್ಳುವವರೇ ಜಾಸ್ತಿಯಿದ್ದಾರೆ. ಲೇವಾದೇವಿ ಮಾಡುವವರು ಕಾನೂನು ರೀತ್ಯಾ ಮಾಡಿದ್ದಾರೆಯೇ? ಅಥವಾ ಈ ಚೆಕ್ಕುಗಳನ್ನು ಕೊಟ್ಟು ಕೋರ್ಟಿಗಳಿಗೆ ಹಾಕಿಕೊಂಡಿದ್ದಾರೆ. 10–15 ಲಕ್ಷದವರೆಗೂ ಚೆಕ್ಕುಗಳನ್ನು ಹಾಕಿಕೊಂಡಿದ್ದಾರೆ. ಅವರುಗಳಿಗೆ ಹಣ ಎಲ್ಲಿಂದ ಬಂತು ಎಂಬುದನ್ನಾದರೂ ನಾವು ಕೇಳಬೇಕಲ್ಲ. ಈ ತರಹದ ಒತ್ತಡಗಳಿಂದ ಜನರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ಇದೆ. ದಯಮಾಡಿ, ಇದರ ಬಗ್ಗೆ ಒಂದು ತನಿಖೆ ನಡೆಸಿ. ಈ ತರಹದ ಹಗರಣಗಳು ನಡೆಯುವುದನ್ನು ನಿಲ್ಲಿಸುವುದಕ್ಕೆ ಸರ್ಕಾರ ಗಮನಹರಿಸಬೇಕು. ಯಾವ್ಯಾವ ಬ್ಯಾಂಕುಗಳ ಚೆಕ್ಕುಗಳು ಕೋರ್ಟುಗಳದೆ, ಆ ಚೆಕ್ಕುಗಳಿಗೆ ಸಂಬಂಧಿಸಿದಂತೆ ಎಲ್ಲಿಂದ ಹಣ ಬಂತು ಎಂದು ಕೇಳುವ ಕೆಲಸವನ್ನಾದರೂ ಸರ್ಕಾರ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಬಹುತೇಕ ಆತ್ಮಹತ್ಯೆಗಳು ಅವಮಾನದಿಂದ ಮತ್ತು ಅಲ್ಲಿನ ಕಿರುಕುಳದಿಂದ ಆಗುತ್ತದೆಂದು ಇದುವರೆಗೂ ಬಂದಿರುವ ವರದಿ. ದಯಮಾಡಿ ಇದರ ಬಗ್ಗೆ ಸರ್ಕಾರ ಒಂದು ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):–

ಸನ್ಮಾನ್ಯ ಉಪಾಧ್ಯಕ್ಷರೆ, Money- Lenders ಕಾನೂನಿನಡಿ ಮತ್ತು ಈ ತರಹದ ಗಿರವಿ ಅಂಗಡಿಗಳಿಗೆ ಸಂಬಂಧಪಟ್ಟ ಕಾನೂನುಗಳಡಿ ಎಷ್ಟು ಬಡ್ಡಿಯನ್ನು ಆಕರಣೆ ಮಾಡಬೇಕೆಂಬ ವಿಚಾರದಲ್ಲಿ ಬೇಕಾದಷ್ಟು ಕಾನೂನುಗಳಿವೆ. ಆದರೆ, ಇದಕ್ಕೆ ಇಲ್ಲಿಯವರೆಗೂ ಕೂಡ ಅಸಡ್ಡೆಯಿಂದ ಇಂತಹ ಮೀಟರ್ ಬಡ್ಡಿಯನ್ನು ಇಟ್ಟುಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳುತ್ತಿರಲಿಲ್ಲ. ಹುಬ್ಬಳ್ಳಿಯಲ್ಲಿ ಅಲ್ಲಿನ ಆಯುಕ್ತರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಸುಮಾರು 20–25 ಜನರ ಮೇಲೆ ಕೇಸ್‌ಗಳನ್ನು ಕೂಡ ಹಾಕಿದ್ದಾರೆ. ಅಲ್ಲಿ ಅದನ್ನು ನಿಯಂತ್ರಿಸುವುದೂ ಆಗಿದೆ. ನಾವು ಪೋಲೀಸ್ ಇಲಾಖೆಯಿಂದ ನಮ್ಮ ಎಲ್ಲ ಪೋಲೀಸ್ ಅಧೀಕ್ಷಕರಿಗೆ ಈ ತರಹದ ಕ್ರಮಗಳನ್ನು ನೀವು ಕೈಗೊಳ್ಳಬೇಕು. ಅಲ್ಲಿರುವ ಮುಗ್ದರ ಶೋಷಣೆ ಮಾಡುವುದು, ನೂರಕ್ಕೆ ಹತ್ತು ಪರ್ಸೆಂಟನಷ್ಟು ಬಡ್ಡಿ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದ್ದೇವೆ. ತಾವು ಕೂಡ ತಮ್ಮ ಪ್ರಕರಣವನ್ನು ತಿಳಿಸಿದ್ದೀರಿ. ಖಂಡಿತವಾಗಿಯೂ, ನಾವು ಮತ್ತೊಮ್ಮೆ ಪೋಲೀಸರೆಲ್ಲರಿಗೂ, ಎಲ್ಲ ಅಧೀಕ್ಷಕರುಗಳಿಗೂ ಇದರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ತಾವು ಹೇಳಿದ ಮತ್ತೊಂದು ಮುಖ್ಯವಾದ ವಿಷಯ, 10 ಲಕ್ಷ, 15 ಲಕ್ಷ, ಈ ತರಹದ ಚೆಕ್ಕುಗಳನ್ನು ಕೊಟ್ಟಾಗ ಅದು ಬೌನ್ಸ್ ಆಗಿದ್ದರೆ, ಕ್ರಿಮಿನಲ್ ಕೇಸ್ ಆಗುತ್ತದೆ. Negotiable Instrument Act ಅನ್ನು ಈಗ ತಿದ್ದುಪಡಿ ಮಾಡಿರುವ ಕಾರಣಕ್ಕಾಗಿ ಅಲ್ಲಿ ಬಹಳ ಕಷ್ಟದ ಕೆಲಸವಿದೆ. ಆ ಕಾರಣಕ್ಕಾಗಿಯೇ ಅವರಿಗೆ ದುಡ್ಡು ಎಲ್ಲಿಂದ ಬಂತು? ಮತ್ತು ಈ ರೀತಿ ಕೊಡುವುದಕ್ಕೆ ಹೇಗೆ ಸಾಧ್ಯವಿದೆ? ಮತ್ತು ಆದಾಯ ಕರ ಕಟ್ಟಿದ್ದಾರೆಯೇ? ಈ ಎಲ್ಲ ವಿಚಾರಗಳ ಬಗ್ಗೆಯೂ ನಾವು ಯೋಚಿಸಬೇಕಾಗುತ್ತದೆ. ಅದರ ರೀತಿಯಲ್ಲೂ ತಾವು ತನಿಖೆ ನಡೆಸಬೇಕೆಂದು ಅವರು ಕೊಟ್ಟಿರುವ ಸಲಹೆ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾವು ಪೋಲೀಸರಿಗೆ ಸೂಚನೆ ಕೊಡುತ್ತೇವೆ. ಅದೇ ರೀತಿಯಾಗಿ ಈ ಕ್ರಮಗಳನ್ನು ರಿಜಿಸ್ಟ್ರಾರ್‌ಗಳು ಕೂಡ ಮಾಡಬೇಕಾಗುತ್ತದೆ. ಅವರಿಗೂ ಪತ್ರ ಬರೆಯಲು ನಾನು Co-operation Minister ಮೂಲಕವಾಗಿಯೇ ಅದನ್ನು ಮಾಡಿಸಿಕೊಡುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಸೋಮವಾರ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 24 ನಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 6ನೇ ಆಗಸ್ಟ್ ಮಾಹೆ 2007ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಆರನೇ ಅಧಿವೇಶನ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2007

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 32)

ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲಾದ ಸಮ್ಮತಾಭಿಪ್ರಾಯದ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005(6) ಎಸ್‌ಸಿಸಿ 537 ರಲ್ಲಿ ವರದಿಯಾದ ಪಿ.ಎ.ಇನಾಂದಾರ್ ಮತ್ತು ಇತರರು– ವಿರುದ್ಧ– ಮಹಾರಾಷ್ಟ್ರ ರಾಜ್ಯ– ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ರಾಜ್ಯ ಸರ್ಕಾರವು, ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ 2007–08ನೇ ವರ್ಷದಲ್ಲಿ ಖಾಸಗಿ ಅನುದಾನತವಲ್ಲದ ವೃತ್ತಿಶಿಕ್ಷಣ ಸಂಸ್ಥೆಗಳೊಡನೆ ಸಮ್ಮತಾಭಿಪ್ರಾಯದ ಒಪ್ಪಂದ ಮಾಡಿಕೊಂಡಿರುವುದರಿಂದ ಮತ್ತು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ ಸಮ್ಮತಾಭಿಪ್ರಾಯದ